ಕೃತಿಯೊಂದು ಇಂಗ್ಲಿಷ್ ಸೇರಿದಂತೆ ವಿಶ್ವದ ಹಲವು ಭಾಷೆಗಳಿಗೆ ಅನುವಾದಗೊಂಡಿದೆ. ನನ್ನ 22ನೇ ವಯಸ್ಸಿನಲ್ಲಿ ನಾನದನ್ನು ಮಲಯಾಳಂಗೆ ಅನುವಾದಿಸಿದೆ. ಮಲಯಾಳಂ ಸಾಹಿತ್ಯ ವಲಯದಲ್ಲಿ ನಾನು ರಚಿಸಿದ ಎಲ್ಲಾ ಕವಿತೆ, ಗೀತೆಗಳನ್ನು ಜನರು ಮರೆತರೂ ಈ ಅನುವಾದವನ್ನು ಮರೆಯಲು ಸಾಧ್ಯವಿಲ್ಲ ಎನ್ನುವುದು ನನ್ನ ದೃಢ ನಂಬಿಕೆ.

ನಾನೊಬ್ಬ ಭಾಷಾಪ್ರಜ್ಞೆಯ ಕವಿ. ಆಯಾ ಕಾಲಘಟ್ಟದಲ್ಲಾಗುವ ಭಾಷಾ ವ್ಯತ್ಯಾಸಗಳ ಬಗ್ಗೆ ಸದಾ ಎಚ್ಚರದಿಂದ ಇರುತ್ತೇನೆ. ನನ್ನ ವಯಸ್ಸು ನೋಡಿದರೆ ಎಷ್ಟು ಕವಿತೆಗಳನ್ನು, ಕೃತಿಗಳನ್ನು ನಿರೀಕ್ಷಿಸಬಹುದೋ ಅದಕ್ಕಿಂತ ಬಹಳ ಕಡಿಮೆ ಬರೆದವನು. ಈಗೀಗ 'ಆಕ್ಟಿವಿಸಂ' ನನಗೆ ಹೆಚ್ಚು ಹತ್ತಿರವಾಗುತ್ತಿದೆ. ಈಗಿನ ಸಾಮಾಜಿಕ ಪರಿಸ್ಥಿತಿ ಹಾಗೆ ಮಾಡಿಬಿಟ್ಟಿದೆ. ಸಾರ್ವಜನಿಕ ಕಲಾ ಅಭಿವ್ಯಕ್ತಿಯ ಬಗ್ಗೆ ನನಗೆ ಬಹಳ ಆಸಕ್ತಿ.

ರಾಷ್ಟ್ರೀಯ ದೃಷ್ಟಿಕೋನ ಎನ್ನುವುದು ನನ್ನಲ್ಲಿ ಮೊದಲಿನಿಂದಲೂ ಇದೆ. ಅದು ಇತಿಹಾಸದೊಂದಿಗೆ ಮಿಳಿತಗೊಂಡು ಕವಿತೆಗಳಲ್ಲಿ ವ್ಯಕ್ತವಾಗುತ್ತದೆ. ನನ್ನ ಕವಿತೆಗಳೂ ದೀರ್ಘವಾಗಿರುತ್ತವೆ. ನಿರೂಪಣಾತ್ಮಕವಾದ ಸುದೀರ್ಘ ಕವಿತೆಗಳನ್ನು ಹೆಚ್ಚು ಬರೆಯುತ್ತೇನೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ 50 ವರ್ಷಗಳಾದ ಸಂದರ್ಭದಲ್ಲಿ, 1997ರಲ್ಲಿ, 'ಏಕಾಂತದ ಐವತ್ತು ವರ್ಷಗಳು' ಎನ್ನುವ ಕವಿತೆ ಬರೆದೆ. ಸ್ವಾತಂತ್ರ್ಯ ಸಿಕ್ಕ ರಾತ್ರಿಗೆ ಮೊದಲು ಹೋರಾಟದಲ್ಲಿ ತೊಡಗಿದ್ದ ಯುವಕನೊಬ್ಬನ ತಲೆಗೆ ಏಟು ಬಿದ್ದು 50 ವರ್ಷಗಳಿಂದ ಆತ ಮುಂಬೈಯಲ್ಲಿ ಕೋಮಾ ಸ್ಥಿತಿಯಲ್ಲಿರುವ ಒಂದು ರೂಪಕ ಆ ಕವಿತೆಯಲ್ಲಿದೆ. ಆತನ ಸಂದರ್ಶನ ಮಾಡಲು ಮಾಧ್ಯಮಗಳು ಮೈಕು, ಕ್ಯಾಮೆರಾ ಹಿಡಿದು ನಿಲ್ಲುವ ಚಿತ್ರಗಳೊಂದಿಗೆ, ಕ್ಯಾಮೆರಾ ದೃಷ್ಟಿಕೋನದಿಂದ ಕವಿತೆ ನಿರೂಪಣೆಗೊಳ್ಳುತ್ತಾ ಸಾಗುತ್ತದೆ. ತಕ್ಷಣ ಜನರ ಕಡೆಗೆ ಕವಿತೆ ಹೊರಳುತ್ತದೆ. ಇಡೀ ಕವಿತೆ ಈ ಪಲ್ಲಟಗಳೊಂದಿಗೆ ಸಾಗುತ್ತದೆ. ಈ ಕವಿತೆ ಆಗ ಬಹಳ ಜನಪ್ರಿಯವಾಗಿತ್ತು. ಕಾವ್ಯ ಪ್ರಕಾರದಲ್ಲಿ ಈ ಬಗೆಯ ಪ್ರಯೋಗವನ್ನು ಪರಿಚಯ ಮಾಡಿದ್ದು ಇದೇ ಕವಿತೆಯಾಗಿತ್ತು. ಅದನ್ನು ವಿಮರ್ಶಕರೂ ಗುರುತಿಸಿದ್ದರು. ಬಳಿಕ ಅಂತಹ ಪ್ರಯೋಗ ಹೆಚ್ಚು ನಡೆಯುತ್ತಾ ಬಂದವು.

ಮುಖ್ಯವಾಗಿ ನಾನೊಬ್ಬ ಸಾಕ್ಷ್ಯಚಿತ್ರ ನಿರ್ಮಾಪಕ. ಕೇರಳ ರಾಜ್ಯ ಸರ್ಕಾರದ ಅಧೀನದಲ್ಲಿದ್ದ 'ಸೆಂಟರ್ ಫಾರ್ ಇಮೇಜಿಂಗ್ ಟೆಕ್ನಾಲಜಿ' ಎನ್ನುವ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ. ಹೊಟ್ಟೆಪಾಡಿಗೆ ಆಗ ಇದ್ದದ್ದು ಅದೇ ಕೆಲಸ ಆಗಿತ್ತು. ಅಲ್ಲಿ ಬಹಳಷ್ಟು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿದ್ದೇನೆ. ಬಹಳ ಮುಖ್ಯವಾಗಿ, ಮಲಯಾಳಂ ಚಿತ್ರರಂಗದ ಮೊತ್ತಮೊದಲ ನಟ, ನಟಿಯರು, ಗಾಯಕರು, ಸಂಗೀತ ನಿರ್ದೇಶಕರು – ಹೀಗೆ ಅನೇಕ ಮೊದಲಿಗರನ್ನು ಸಂದರ್ಶನ ಮಾಡಿ, 'ಶೇಷಂ ವೆಳ್ಳಿತೆರಯಿಲ್' (ಬೆಳ್ಳಿಪರದೆಯ ಆಚೆಗೆ) ಎಂಬ ಸಾಕ್ಷ್ಯಚಿತ್ರ ಮಾಡಿದ್ದೆ. ಸಿನಿಮಾ ಸಂಬಂಧಿಸಿದ ಕ್ಯಾಮೆರಾ ನಿರ್ವಹಣೆಯ ಜ್ಞಾನ ಇರುವುದರಿಂದ, ಆ ತಿಳಿವಳಿಕೆಯನ್ನೇ ಕಾವ್ಯದಲ್ಲೂ ಅಳವಡಿಸಲು ಆರಂಭಿಸಿದೆ.

ನಾನು ಸಿನಿಮಾಗಳಿಗೆ ಹಾಡು ಬರೆಯಲು ಆರಂಭಿಸಿದ್ದು 2013ರಲ್ಲಿ, 'ಅನ್ನಯುಂ ರಸೂಲುಂ' ಸಿನಿಮಾದ ಮೂಲಕ. ಅದೊಂದು ಆಕಸ್ಮಿಕ ಅಂತ ಹೇಳಬಹುದು. ಸಿನಿಮಾದ ನಿರ್ದೇಶಕ ರಾಜೀವ್ ನನ್ನ ಸ್ನೇಹಿತ. ಅವರ ಒತ್ತಾಯಕ್ಕೆ ಹಾಡು ಬರೆದೆ. ನಂತರದಲ್ಲಿ ಅದು ಖುಷಿಕೊಟ್ಟಿತು. ಸಿನಿಮಾ ನನ್ನ ಪಾಲಿಗೆ ಪರಿಚಿತ ವಲಯವೇ ಆಗಿದ್ದರಿಂದ ನನಗೇನೂ ಹೊಂದಿಕೆ ಕಷ್ಟ ಅನಿಸಿಲ್ಲ. ಯುವ ತಂಡದ ಸಿನಿಮಾಗಳಿಗೆ ನಾನು ಸಾಹಿತ್ಯ ರಚಿಸುತ್ತಿದ್ದೇನೆ. ಅವರೂ ಅವನ್ನು ಇಷ್ಟಪಡುವುದರಿಂದ ಖುಷಿಯಾಗುತ್ತದೆ. ಯುವಸಮೂಹದ ಜೊತೆಗೆ ಕೆಲಸ ಮಾಡುವುದರಿಂದ, ಇನ್ನೇನು ಆವರಿಸಿಯೇಬಿಡುತ್ತಿದ್ದ ಖಾಲಿತನದಿಂದ ಬಚಾವಾಗಿ, ಖುಷಿಯ ಕಡೆ ಸಾಗುತ್ತಿದ್ದೇನೆ.

ಕವಿತೆ ಹಾಗೂ ಸಿನಿಮಾ ಸಾಹಿತ್ಯ ಎರಡು ಭಿನ್ನ ಪ್ರಕಾರಗಳು. ಕವಿಗೆ ಸಿನಿಮಾ ಸಾಹಿತ್ಯ ಬರೆಯಲು ಅಸಾಧ್ಯವಾದದ್ದು ಅಂತಲ್ಲ. ಒಬ್ಬ ಉತ್ತಮ ಕವಿ, ತನ್ನ ಕಾವ್ಯರಚನೆಯ ಕೌಶಲಗಳನ್ನು ಸಿನಿಮಾ ಸಾಹಿತ್ಯದಲ್ಲಿ ಅಳವಡಿಸಲು ಪ್ರಯತ್ನಿಸುತ್ತಾನೆ.

ಹೆಚ್ಚಿನ ಚಿತ್ರಸಾಹಿತಿಗಳ ದೂರು ಎಂದರೆ, ಸಿನಿಮಾದೊಳಗಿನ ಮಿತಿ. ಸಿನಿಮಾದ ಕಥೆ,